◆ **ನೀವು ವಿಜ್ಞಾನದ ವಿದ್ಯಾರ್ಥಿ. ಆಮೇಲೆ ಕನ್ನಡ ಸಾಹಿತ್ಯವನ್ನು ಆಯ್ದುಕೊಂಡು ಪದವಿ ಪಡೆದುಕೊಂಡ್ರಿ. ಕನ್ನಡ ಸಾಹಿತ್ಯದ ಹಲವು ಮುಖಗಳನ್ನು ಗಂಭೀರವಾಗಿ ವಿಮರ್ಶಿಸಿದಿರಿ. ಈ ಹೊರಳುವಿಕೆಗೆ ಏನು ಕಾರಣ?**

ಕಾರಣ ಹೇಳುವುದು ಕಷ್ಟ. ಒಂದು ಕಾರಣ ಏನಂತಂದ್ರೆ ಸಾಹಿತ್ಯದಲ್ಲಿ ಆಸಕ್ತಿ ಇತ್ತು. ವಾಸ್ತವವಾಗಿ ನನಗೆ ವಿಜ್ಞಾನದಲ್ಲಿ ಎಂ.ಎಸ್ಸಿ., ಮಾಡಲು ಬೇಕಿದ್ದ ಅಂಕಗಳು ಬರಲಿಲ್ಲ. ಫಿಜಿಕ್ಸ್‌ನಲ್ಲೂ ಬರಲಿಲ್ಲ, ಕೆಮೆಸ್ಟ್ರಿಯಲ್ಲೂ ಬರಲಿಲ್ಲ. ಮ್ಯಾಥ್ಸ್‌ನಲ್ಲಿ ಅಂಕಗಳಿದ್ವು. ಆದರೆ ಅದು ಮೈನರ್ ಸಬ್ಜೆಕ್ಟಾಗಿ ಇದ್ದಿದ್ರಿಂದ ಮಾಡಲು ಅವಕಾಶವಿರಲಿಲ್ಲ. ಹೀಗಾಗಿ ನಾನು ಬಿ.ಎಡ್., ಓದ್ಕೊಂಡು ಒಂದು ಹೈಸ್ಕೂಲಿನಲ್ಲಿ ಕೆಲಸ ಮಾಡ್ತಿದ್ದೆ. ಅಲ್ಲಿದ್ದ ಅನೇಕ ಶಿಕ್ಷಕರು ನನಗೆ ಹೇಳಿದ್ರು; 'ನೀನು ಟೀಚರ್ ಆಗಿ ಇರ್ಬೇಡ. ಇನ್ನೇನಾದ್ರೂ ಹೆಚ್ಚಿಗೆ ಓದು. ಐಎಎಸ್ ಮಾಡು, ಕೆಎಎಸ್ ಮಾಡು' ಇತ್ಯಾದಿ. ಇದರಲ್ಲೆಲ್ಲ ನನಗೆ ಅಷ್ಟು ಆಸಕ್ತಿ ಇರಲಿಲ್ಲ. ಆ ವರ್ಷ ನನ್ನ ಚಿಕ್ಕಪ್ಪನ ಮಗಳ ಮದುವೆ ಆಯ್ತು. ಆ ಮದುವೆಗೆ ಬಂದ ಜನಗಳಲ್ಲಿ ಕೆ.ಜಿ.ನಾಗರಾಜಪ್ಪ ಕೂಡ ಒಬ್ರು.

ನಾಗರಾಜಪ್ಪನವರ ಭಾವಮೈದುನನಿಗೆ ನನ್ನ ತಂಗಿಯನ್ನು ಕೊಟ್ಟಿದ್ರು. ಅವರು ಮಾತಾಡ್ತಾ ಮಾತಾಡ್ತಾ 'ನೀನು ಯಾಕೆ ಹೆಚ್ಚಿಗೆ ಓದುಬಾರ್ದು? ಕನ್ನಡ ಎಂ.ಎ., ಓದು' ಅಂತ ಹೇಳಿದ್ರು. ಮೈಸೂರಿಗೆ ಅರ್ಜಿ ಹಾಕು ಅಂದ್ರು. ಕನ್ನಡ ನನಗೆ ಮೈನರ್ ಲಾಂಗ್ವೇಜ್ ಆಗಿತ್ತು. ಆಗ ಮೈಸೂರಿನಲ್ಲಿ ದೇ. ಜವರೇಗೌಡರಿದ್ರು. 'ಕೊಡ್ತೀನಿ, ಆದ್ರೆ ಮಂಗಳೂರಿಗೆ ಹೋಗಿ ಓದು' ಅಂದ್ರು. ಸೆಕೆಂಡ್ ಲಾಂಗ್ವೇಜ್ ಆಗಿದ್ದಿಂದ್ರ ಅಲ್ಲಿಗೆ ಹೋಗ್ಬೇಕಾಗಿತ್ತು. ಅಲ್ಲಿಗೆ ಹೋಗಲು ನನಗೆ ಇಷ್ಟವಿರಲಿಲ್ಲ. ನಾಗರಾಜಪ್ಪನೋರು ಶಿವರುದ್ರಪ್ಪನೋರ ವಿದ್ಯಾರ್ಥಿ ಆಗಿದ್ರು. 'ನಾನು ಶಿವರುದ್ರಪ್ಪನೋರಿಗೆ ಹೇಳ್ತೀನಿ. ನೀನು ಬೆಂಗಳೂರಿಗೆ ಅರ್ಜಿ ಹಾಕು' ಅಂದ್ರು. ನಾಗರಾಜಪ್ಪನೋರು ಕೊಟ್ಟ ಚೀಟಿ ತಗೊಂಡು ಶಿವರುದ್ರಪ್ಪನೋರ ಕಡೆ ಹೋದೆ. ಅವ್ರು ಚೀಟಿ ನೋಡಿದ್ರು. ಆಮೇಲೆ 'ಸೆಕೆಂಡ್ ಲಾಂಗ್ವೇಜ್ ಓದ್ಕೊಂಡು ಬಂದ್ಬಿಡ್ತಾರೆ. ಶಬ್ದಮಣಿದರ್ಪಣವೆಲ್ಲ ಗೊತ್ತಾಗೊದಿಲ್ಲ ಇವ್ರಿಗೆ' ಅಂತ ಗೊಣಗಿದ್ರು. ನಾನು ಸೀಟು ಸಿಗಲ್ಲ ಅಂದ್ಕೊಂಡೆ. ಆಮೇಲೆ ಸೀಟು ಕೊಟ್ರು. ಆವಾಗ ನನ್ನ ಕ್ಲಾಸಿನಲ್ಲಿ ಎಂ.ಎ., ಕನ್ನಡ ಸೇರಿದವ್ರಲ್ಲಿ ಎಂಟೊಂಬತ್ತು ಜನ ಸೆಕೆಂಡ್ ಲಾಂಗ್ವೇಜ್ ಆಗಿ ಕನ್ನಡವನ್ನೇ ಓದಿದ್ರು. ಅದಕ್ಕೆ ಕಾರಣವೂ ಇತ್ತು. ಆಗ ಬೆಂಗಳೂರಿನ ಬಹುತೇಕ ಕಾಲೇಜುಗಳಲ್ಲಿ ಕನ್ನಡ ಮೇಜರ್ ವಿಷಯವಾಗಿ ಇರಲಿಲ್ಲ. ಕೆಲವೇ ಕಾಲೇಜುಗಳಲ್ಲಿ ಇತ್ತು. ಆರ್ಟ್ಸ್ ಕಾಲೇಜು, ವಿಜಯಾ ಕಾಲೇಜು ಹೀಗೆ ಒಂದೆರಡು ಕಾಲೇಜುಗಳಲ್ಲಿ ಮಾತ್ರ ಮೇಜರ್ ಕನ್ನಡಕ್ಕೆ ಅವಕಾಶವಿತ್ತು. ತುಂಬಾ ವಿದ್ಯಾರ್ಥಿಗಳು ಕನ್ನಡ ಮೇಜರ್ ತಗೊಳ್ತಿರಲಿಲ್ಲ. ಇದ್ರಿಂದ ನಮಗೆಲ್ಲ ಅವಕಾಶ ಸಿಗ್ತು. ಹೀಗಾಗಿ ಯಾವ ಕಡೆ ಹೋಗ್ಬೇಕು ಅನ್ನೋದು ಸರಿಯಾಗಿ ಗೊತ್ತಾಗ್ದೆ ಬಂದದ್ದು. ಆದ್ರೆ ಸಾಹಿತ್ಯದಲ್ಲಿ ಆಸಕ್ತಿ ಮಾತ್ರ ಇತ್ತು. ತುಂಬಾ ಓದುತ್ತಿದ್ದೆ. ಮಹಾರಾಜಾಸ್ ಕಾಲೇಜಿನಲ್ಲಿದ್ದಾಗ ಸಾಕಷ್ಟು ಓದಿದೆ. ಅದರಲ್ಲೂ ಮೈಸೂರಿನ ಪಬ್ಲಿಕ್ ಲೈಬ್ರರಿ ನನಗೆ ಇಷ್ಟದ ಸ್ಥಳ. ಬಹಳ ಒಳ್ಳೆಯ ಲೈಬ್ರರಿ. ಈಗಲೂ ಇದೆ. ಆವಾಗ ನಾನು ಹೆಚ್ಚು ಓದಿದ್ದು ಕಾದಂಬರಿಗಳನ್ನು, ಕವಿತೆಗಳನ್ನು ಕೂಡ. 'ಶ್ರೀರಾಮಾಯಾಣದರ್ಶನಂ' ಆವಾಗಲೇನೆ ಓದಿದ್ದೆ.

ನಮ್ಮಪ್ಪ ಗಾಂಧೀವಾದಿ. ಗಾಂಧೀ ಸಾಹಿತ್ಯವನ್ನೆಲ್ಲ ಮನೆಗೆ ತಕ್ಕೊಂಡು ಬರ್ತಾ ಇದ್ರು. ವಿನೋಬಾ ಭಾವೆ ಅವರು ಭೂದಾನ ಚಳವಳಿ ಮಾಡಿದಾಗ ನಮ್ಮ ಊರು ಪಿರಿಯಾಪಟ್ಟಣದ ಹತ್ತಿರ ಒಂದು ಕ್ಯಾಂಪ್ ಹಾಕಿದ್ರು. ಆ ಕ್ಯಾಂಪ್‌ನಲ್ಲಿ ಗಾಂಧೀ ಸಾಹಿತ್ಯವನ್ನು ಮಾರಾಟ ಮಾಡ್ತಿದ್ರಂತೆ. ಅಲ್ಲಿಂದ ರಾಶಿರಾಶಿ ಪುಸ್ತಕಗಳನ್ನು ನಮ್ಮಪ್ಪ ಹೊತ್ಕೊಂಡು ತಂದ್ರು. ಆ ಪುಸ್ತಕಗಳನ್ನು ಓದೋದಿಕ್ಕೆ ಅವಕಾಶವಾಯ್ತು. ನಮ್ಮೂರಲ್ಲಿ ಒಬ್ರು ಕೆ. ಮಲ್ಲಪ್ಪ ಅಂತ ಇದ್ರು. ಭಾಳ ಒಳ್ಳೆಯ, ಕ್ರಿಯೇಟಿವ್ ಆದ ವ್ಯಕ್ತಿ. ಅವರ ಮನೆಯಲ್ಲಿ ಒಳ್ಳೆಯ ಲೈಬ್ರರಿ ಇತ್ತು. ಅವರು ಆ ಕಾಲಕ್ಕೆ 'ಯಂಗ್ ಇಂಡಿಯಾ' ಪತ್ರಿಕೆಯನ್ನು ಮನೆಗೆ ತರಸ್ತಾ ಇದ್ರು. ಆಮೇಲೆ ಆ ಪತ್ರಿಕೆಗಳನ್ನೆಲ್ಲ ಸೇರಿಸಿ ಬೈಂಡಿಂಗ್ ಮಾಡಿಸಿ ಪುಸ್ತಕ ಮಾಡ್ಸಿ ಇಡೋರು. ಆಮೇಲೆ ಏನಾಯ್ತೊ ಗೊತ್ತಿಲ್ಲ. ಅವರು ಮನೆಬಿಟ್ಟು ಓಡಿ ಹೋಗಿ ಕೆ.ಆರ್.ಎಸ್.ನಲ್ಲಿ ಬಿದ್ದು ಸತ್ತೋಗಿಬಿಟ್ರು. ಅವರ ಲೈಬ್ರರಿ ಡಿಸ್‌ಮ್ಯಾಂಟಲ್ ಆಯ್ತು. ನಮ್ಮಪ್ಪ ಅಲ್ಲಿಂದ ಪುಸ್ತಕಗಳನ್ನು ತಗೊಂಡು ಬಂದ್ರು. ಯಾಕೆಂದ್ರೆ ಅವ್ರಿಬ್ರೂ ಸ್ನೇಹಿತರು. ಅಲ್ಲದೆ ನಮ್ಮೂರಲ್ಲಿ ಒಂದು